**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ**

**ವಿಶೇಷ ಪ್ರಕರಣ ಸಂಖ್ಯೆ 39/2021**

ಪಿರ್ಯಾದುದಾರರುಃ ಚನ್ನಪಟ್ಟಣ ಗ್ರಾಮಾಂತರ ಆರಕ್ಷಕ ಠಾಣೆ

ವಿರುದ್ಧ

ಆರೋಪಿತರುಃ

1. ಸೈಯದ್ ಇನಾಯತ್ @ ಜಾವಿದ್ದ,
   ಬಿನ್ ಸೈಯದ್ ಇಬ್ರಾಹಿಂ,
   ವಯಸುಃ 24 ವರ್ಷ,
   ಉದ್ಯೋಗಃ ಮೆಕ್ಯಾನಿಕ್ ಕೆಲಸ,
   ವಾಸಃ ಕೃಷ್ಣಪ್ಪನ ಮನೆ ಹತ್ತಿರ,
   4 ನೇ ಕ್ರಾಸ್, 2 ನೇ ಮೈನ್,
   ಗಂಗಾನಗರ, ಆರ್. ಟಿ. ನಗರ ಅಂಚೆ,
   ಬೆಂಗಳೂರು.

2. ಜಮೀರ್ ಖಾನ್ @ ಜಮೀರ್ @ ಜಮ್ಮು,
   ಬಿನ್ಃ ಅತಾವುಲ್ಲಾಖಾನ್,
   ವಯಸುಃ 28 ವರ್ಷ,
   ಉದ್ಯೋಗಃ ಟ್ರಾವೆಲ್ ಮಾಲೀಕ,
   ವಾಸಃ ನಂ.91, ತಿರುಪತಿ ಪಾಳ್ಯ,
   ಶ್ರೀರಾಂಪುರ ಮೈನ್ ರಸ್ತೆ,
   ಜಕ್ಕೂರು, ಬ್ಯಾಟರಾಯನಪುರ,
   ಬೆಂಗಳೂರು.

3. ಶ್ರೀಮತಿ ರೇಷ್ಮಾ
   ಕೋಂಃ ಜಮೀರ್ ಖಾನ್ @ ಜಮೀರ್ @ ಜಮ್ಮು,
   ವಯಸುಃ 25 ವರ್ಷ,
   ಉದ್ಯೋಗಃ ಗೃಹಿಣಿ,
   ವಾಸಃ ನಂ.91, ತಿರುಪತಿ ಪಾಳ್ಯ,
   ಶ್ರೀರಾಂಪುರ ಮೈನ್ ರಸ್ತೆ,
   ಜಕ್ಕೂರು, ಬ್ಯಾಟರಾಯನಪುರ,
   ಬೆಂಗಳೂರು.

*****

ದಂಡ ಪ್ರಕ್ರಿಯಾ ಸಂಹಿತೆ ಕಲಂ ***313*** ರಡಿ ಆರೋಪಿಯ ಹೇಳಿಕೆ

ಪ್ರಶ್ನೆಃ**-1 :** ಅಭಿಯೋಜನೆಯ ಪರ ಸಾಕ್ಷಿ ವಿಚಾರಣೆ ಕೇಳಿದ್ದೀರಾ?

ಉತ್ತರಃ**-**

ಪ್ರಶ್ನೆ**-2 :** ಫ್ರಾ.ಸಾ.**-1,** ಸುರೇಂದ್ರ ರವರು ತಮ್ಮ ಸಾಕ್ಷ್ಯದಲ್ಲಿ ದಿಃ05.03.2021 ರಂದು ತಾನು, ತನ್ನ ಹೆಂಡತಿ, ಸಂತ್ರಸ್ಥೆ ಮತ್ತು ಮತ್ತೊಬ್ಬ ಮಗಳು ಕೂಡ್ಲೂರು ಗ್ರಾಮಕ್ಕೆ ಹೋಗಿ, ದಿಃ09.03.2021 ರಂದು ಬೆಳಿಗ್ಗೆ 10.00 ಗಂಟೆ ಸಮಯಕ್ಕೆ ಮಂಗಳೇಶ್ವರ ದೇವಸ್ಥಾನಕ್ಕೆ ಹೋಗಿದ್ದು, ತಮ್ಮ ಮಗಳು ತಮ್ಮ ಜೊತೆಯಲ್ಲಿಯೇ ದೇವಸ್ಥಾನ ಸುತ್ತುತ್ತಿದ್ದವಳು ತಾವು ದೇವಸ್ಥಾನದ ಮುಂಭಾಗದಲ್ಲಿ ನಿಂತಿದ್ದರೂ ಬರಲಿಲ್ಲ, ನಂತರ ದೇವಸ್ಥಾನದ ಹಿಂಭಾಗದಲ್ಲಿ ನೋಡಲು ಹೋದಾಗ ಯಾರೋ 3 ಜನ ತನ್ನ ಮಗಳನ್ನು ಕೈ ಹಿಡಿದು ಕೆಂಪು ಇಂಡಿಕಾ ಕಾರು ಸಂಖ್ಯೆಃಕೆಎ-5-ಬಿ-0632 ರಲ್ಲಿ ಕರೆದುಕೊಂಡು ಹೋಗಿದ್ದು, ತಾವು ಹಿಂಬಾಲಿಸಿ ಹಿಡಿಯಲು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ, ನಂತರ ಅದೇ ದಿನ ಹೆಬ್ಬಾಳಕ್ಕೆ ಹೋಗಿ ಪೊಲೀಸ್ ಠಾಣೆಯಲ್ಲಿ ಸಂಜೆ 4.00 ಗಂಟೆಗೆ ದೂರು ನೀಡಿರುವುದಾಗಿ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ**-**

ಪ್ರಶ್ನೆ**-3 :** ಫ್ರಾ.ಸಾ.-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ14.03.2021 ರಂದು ಪೊಲೀಸರು ದೂರವಾಣಿ ಕರೆ ಮಾಡಿ ತಮ್ಮ ಮಗಳು ಸಿಕ್ಕಿರುತ್ತಾರೆಂದು ಹೇಳಿದ್ದು, ಠಾಣೆಗೆ ಹೋಗಿ ಮಗಳನ್ನು ಕರೆದುಕೊಂಡು ಬಂದೆವು. 1 ದಿನದ ನಂತರ ಮಗಳನ್ನು ಮಕ್ಕಳ ಆಶ್ರಯ ಕೇಂದ್ರ, ಬೆಂಗಳೂರಿಗೆ ಪೊಲೀಸರು ಕರೆದುಕೊಂಡು ಹೋಗಿದ್ದು, 1 ವಾರದ ನಂತರ ತಮ್ಮನ್ನು ಸಮಿತಿಯ ಮುಂದೆ ಕರೆದು ತನ್ನ ಮಗಳು ಗರ್ಭಿಣಿಯಾಗಿದ್ದಾಳೆ ಎಂದು ತಿಳಿಸಿದರು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ**-**

ಪ್ರಶ್ನೆ**-4 :** ಫ್ರಾ.ಸಾ.-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ತನ್ನ ಮಗಳನ್ನು ವೈದ್ಯಕೀಯ ತಪಾಸಣೆಗಾಗಿ ವಾಣಿವಿಲಾಸ ಆಸ್ಪತ್ರೆಗೆ ಕರೆದುಕೊಂಡು ಹೋಗಿ ವೈದ್ಯಕೀಯ ಪರೀಕ್ಷೆ ಮಾಡಿಸಿದ್ದು, ಪೊಲೀಸರೂ ಸಹ ತನ್ನ ಮಗಳು ಗರ್ಭಿಣಿಯಾಗಿರುತ್ತಾಳೆಂದು ಹೇಳಿದ್ದು, 1 ನೇ ಆರೋಪಿ 3 ನೇ ಆರೋಪಿಯ ಪ್ರೇರಣೆಯಂತೆ ತನ್ನ ಮಗಳನ್ನು ಕರೆದುಕೊಂಡು ಹೋಗಿ ಗರ್ಭಿಣಿ ಮಾಡಿರುವುದಾಗಿ ತಿಳಿಯಿತು. ನಂತರ ಮಗಳಿಗೆ

ಗರ್ಭಪಾತ ಮಾಡಿಸಲು ಕೋರಿದ್ದು ವಾಣಿ ವಿಲಾಸ ಆಸ್ಪತ್ರೆಯಲ್ಲಿ ಗರ್ಭಪಾತ ಮಾಡಿಸಿದ್ದು, ಆ ನಂತರವೂ 1 ಮತ್ತು 3 ನೇ ಆರೋಪಿತರು ತಮಗೆ ದೂರವಾಣಿ ಕರೆ ಮಾಡಿ ಪ್ರಕರಣ ಹಿಂಪಡೆಯುವಂತೆ ಹೇಳಿದರು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆಃ**-5 :** ಫ್ರಾ.ಸಾ.-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆರೋಪಿಗಳು ತನ್ನ ಮಗಳನ್ನು ಬಾಂಬೆಗೆ ಕಳುಹಿಸಿಕೊಡಲು ಯೋಜಿಸಿದ್ದರು ಎಂದು, ಈ ಎಲ್ಲಾ ವಿಷಯಗಳನ್ನು ತಾನು ಪೊಲೀಸರಿಗೆ ಹೇಳಿದ್ದು, ಪೊಲೀಸರು ದಿಃ09.03.2021 ರಂದು ತಮ್ಮ ಊರಿಗೆ ಬಂದು ಸ್ಥಳ ಪಂಚನಾಮೆ ಮಾಡಿದ್ದು ತಾನು ಸದರಿ ದಾಖಲೆಗೆ ಸಹಿ ಮಾಡಿರುವುದಾಗಿ ಹಾಗೂ ಸದರಿ ಸಮಯದಲ್ಲಿ ಚಾಸಾ.4 ಮತ್ತು 5 ಸಹ ಇದ್ದು, ಬೆಳಿಗ್ಗೆ 10.00 ರಿಂದ 12.00 ಗಂಟೆಯವರೆಗೆ ಮಹಜರ್ ಮಾಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆಃ**-6 :** ಫ್ರಾ.ಸಾ.**-2,** ಸಂತ್ರಸ್ಥೆ ತಮ್ಮ ಸಾಕ್ಷ್ಯದಲ್ಲಿ ತನ್ನ ಸ್ನೇಹಿತೆ ಅಸ್ವಿಯಾ 2 ಮತ್ತು 3 ನೇ ಆರೋಪಿಗಳನ್ನು ಅಣ್ಣ ಎಂದು ಬೆಂಗಳೂರಿನಲ್ಲಿ ಪರಿಚಯ ಮಾಡಿಕೊಟ್ಟಿದ್ದು, ತಾನು ದ್ವಿತೀಯ ಪಿಯುಸಿ ವ್ಯಾಸಂಗ ಮಾಡುತ್ತಿದ್ದೆ, 1 ನೇ ಆರೋಪಿಯನ್ನು ಅಸ್ವಿಯಾ ಆಕೆಯ ಸ್ನೇಹಿತ ಎಂದು ಪರಿಚಯ ಮಾಡಿಸಿದ್ದು, ನಂತರ ಗೆಳೆತನ ಬೆಳೆದು ಪ್ರೀತಿಸು ಎಂದು ಒತ್ತಾಯ ಮಾಡುತ್ತಿದ್ದ, ತಾನು ತಿರಸ್ಕರಿಸಿದರೂ ತನ್ನ ಹಿಂದೆ ಬಂದು ಒತ್ತಾಯ ಮಾಡುತ್ತಿದ್ದ, ನಂತರ ತನ್ನನ್ನು 3 ನೇ ಆರೋಪಿಯ ಮನೆಗೆ ಕರೆದುಕೊಂಡು ಹೋಗಿ ಕಾಫಿ, ಟೀ ಕೊಟ್ಟಾಗ ಕುಡಿದ ಕೂಡಲೇ ಪ್ರಜ್ಞೆ ತಪ್ಪುತ್ತಿತ್ತು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆಃ**-7 :** ಫ್ರಾ.ಸಾ.-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ತನ್ನನ್ನು ಇದೇ ರೀತಿ 7-8 ದಿನಗಳ ಕಾಲ ಕರೆದುಕೊಂಡು ಹೋಗುತ್ತಿದ್ದು, ತನಗೆ ಪ್ರಜ್ಞೆ ತಪ್ಪಿದ 2-3 ಗಂಟೆಗಳ ನಂತರ

ಎಚ್ಚರಿಕೆ ಆಗುತ್ತಿತ್ತು, ಪ್ರಜ್ಞೆ ಬಂದಾಗ ತನ್ನ ಮೈಮೇಲೆ ಬಟ್ಟೆ ಇರುತ್ತಿರಲಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆಃ-**8** : ಫ್ರಾ.ಸಾ.-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ27.02.2021 ಮತ್ತು ದಿಃ28.02.2021 ರಂದು ಎರಡು ದಿನಗಳ ಕಾಲ 2 ಮತ್ತು 3 ನೇ ಆರೋಪಿಗಳ ಮನೆಗೆ 1 ನೇ ಆರೋಪಿ ತಾನು ಕಾಲೇಜಿಂದ ಬರುವಾಗ ಕರೆದುಕೊಂಡು ಹೋಗಿ ಇಟ್ಟಿದ್ದು, 1 ಮತ್ತು 3 ನೇ ಆರೋಪಿಗಳು ತನ್ನ ಆಧಾರ್ ಕಾರ್ಡ್ ಮತ್ತು ಇತರೆ ಗುರುತಿನ ಚೀಟಿಗಳನ್ನು ತೆಗೆದುಕೊಂಡು ಬಾ ಇಲ್ಲವಾದರೆ ಮನೆಯ ಬಳಿ ಬಂದು ಗಲಾಟೆ ಮಾಡುತ್ತೇವೆಂದು ಹೇಳಿದರು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆಃ-**9** : ಫ್ರಾ.ಸಾ.-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ05.03.2021 ರಂದು ಬೆಳಿಗ್ಗೆ 10.00 ಗಂಟೆಗೆ ಚನ್ನಪಟ್ಟಣದ ಕೂಡ್ಲೂರಿಗೆ ಮಂಗಳೇಶ್ವರ ದೇವಸ್ಥಾನಕ್ಕೆ ತಾನು ಮತ್ತು ತನ್ನ ತಂದೆ ಹೋಗಿದ್ದು, ಅಲ್ಲಿಗೆ 1 ನೇ ಆರೋಪಿ, ಆತನ ತಮ್ಮ ಮತ್ತು ಸ್ನೇಹಿತ ಬಕಶ್ ಎನ್ನುವವರು ಕೆಂಪು ಬಣ್ಣದ ಜೊಮ್ಯಾಟೋ ಸ್ಟಿಕ್ಕರ್ ಹಾಕಿದ್ದ ಇಂಡಿಕಾ ಕಾರಿನಲ್ಲಿ ಬಂದಿದ್ದು, ತನ್ನನ್ನು 1 ನೇ ಆರೋಪಿ ಸ್ವಲ್ಪ ಮಾತಾನಾಡಬೇಕು ಬಾ ಎಂದು ತಾನು ದೇವಸ್ಥಾನದ ಹಿಂಭಾಗ ಇದ್ದಾಗ ಕರೆದಿದ್ದು, ನಂತರ ತನ್ನನ್ನು ಅವರ ಕಾರಿನ ಬಳಿ ಕರೆದುಕೊಂಡು ಹೋಗಿ ಕಾರಿನ ಒಳಗೆ ಕೂರಲು ಹೇಳಿದರು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆಃ-**10** : ಫ್ರಾ.ಸಾ.-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ 1 ನೇ ಆರೋಪಿ ತನ್ನ ಮೂಗಿನ ಬಳಿ ಯಾವುದೋ ವಸ್ತುವನ್ನು ಇಟ್ಟು ಪ್ರಜ್ಞೆ ತಪ್ಪಿಸಿದ್ದು, ತನಗೆ ಅರ್ಧ ದಿನವಾದ ಮೇಲೆ ಎಚ್ಚರಿಕೆಯಾಗಿ ನೋಡಿದಾಗ ಶಿವಮೊಗ್ಗ ಬಸ್ ನಿಲ್ದಾಣದ ಹೆಸರು ಕಂಡಿದ್ದು, ಅಲ್ಲಿ ಯಾವುದೋ ಒಂದು ಲಾಡ್ಜ್ ಗೆ ಕರೆದುಕೊಂಡು ಹೋಗಿ 2 ದಿನಗಳ ಕಾಲ ಇದ್ದು, 1 ನೇ ಆರೋಪಿ ಅಲ್ಲಿಯೂ ತನ್ನ ಮೇಲೆ ಲೈಂಗಿಕ ಕಿರುಕುಳ

ಎಸಗಿರುತ್ತಾನೆ, ಆಗ 1 ನೇ ಆರೋಪಿ ಮಾತ್ರ ಇದ್ದ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ:-**11 :** ಫ್ರಾ.ಸಾ.-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ 1 ನೇ ಆರೋಪಿ ತಾನೇ ಕಾರನ್ನು ಚಾಲನೆ ಮಾಡಿಕೊಂಡು ಹಾಸನದ ಕಡೆಗೆ ಕರೆದುಕೊಂಡು ಹೋಗಿದ್ದು, ಆ ಸಮಯದಲ್ಲಿ ತನ್ನ ಕೈ ಕಾಲುಗಳನ್ನು ಕಟ್ಟಿ ಬಾಯಿಗೆ ಯಾವುದೋ ಪೇಪರ್ ಅಂಟಿಸಿದ್ದು, ಹಾಸನದಲ್ಲಿ ಬಸ್ ನಿಲ್ದಾಣದ ಬಳಿ ಮತ್ತು ರೈಲ್ವೇ ನಿಲ್ದಾಣದ ಬಳಿ ಲಾಡ್ಜ್ ನಲ್ಲಿ ಇರಿಸಿ ಅಲ್ಲಿಯೂ 1 ನೇ ಆರೋಪಿ 4-5 ಬಾರಿ ಅತ್ಯಾಚಾರ ಎಸಗಿರುತ್ತಾನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ:-**12 :** ಫ್ರಾ.ಸಾ.-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ದಿಃ14.03.2021 ರಂದು ಬೆಳಿಗ್ಗೆ 6 ಗಂಟೆ ಸಮಯದಲ್ಲಿ 1 ನೇ ಆರೋಪಿ ತನ್ನನ್ನು ಅದೇ ಕಾರಿನಲ್ಲಿ ಬೆಂಗಳೂರಿನ ಸುಲ್ತಾನ್ ಪಾಳ್ಯದ ತನ್ನ ಮನೆಯ ಬಳಿ ಕರೆದುಕೊಂಡು ಬಂದಿದ್ದು ಅಲ್ಲಿ ಹೆಬ್ಬಾಳ ಪೊಲೀಸರು ಇದ್ದು ತಮ್ಮನ್ನು ಹಿಡಿದಿರುತ್ತಾರೆ. ನಂತರ ಅದೇ ದಿನ ಸಂಜೆ 4.30 ಕ್ಕೆ ತನ್ನ ತಂದೆ ತಾಯಿಯನ್ನು ಕರೆಸಿ ರಾತ್ರಿ ಸಾಂತ್ವನ ಕೇಂದ್ರಕ್ಕೆ ತನ್ನನ್ನು ಕರೆದುಕೊಂಡು ಹೋಗಿ ಬಿಟ್ಟರು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ:-**13 :** ಫ್ರಾ.ಸಾ.-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ 3 ನೇ ಆರೋಪಿ ಸಾಂತ್ವನ ಕೇಂದ್ರಕ್ಕೂ ಬಂದು ನೀನು 1 ನೇ ಆರೋಪಿಯ ಮನೆಗೆ ಹೋಗು, ತಂದೆ ತಾಯಿ ಮನೆಗೆ ಹೋಗಬೇಡ, ನಾನು ನಿನ್ನನ್ನು ಪೊಲೀಸರಿಗೆ ದುಡ್ಡು ಕೊಟ್ಟು ಒಳಗೆ ಕಳುಹಿಸುತ್ತೇನೆ ಎಂದು ಬೆದರಿಕೆ ಹಾಕಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ:-**14 :** ಫ್ರಾ.ಸಾ.-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ತನ್ನನ್ನು ವೈದ್ಯಕೀಯ ಪರೀಕ್ಷೆಗೆಂದು ವಾಣಿ ವಿಲಾಸ್ ಆಸ್ಪತ್ರೆಗೆ ಕರೆದುಕೊಂಡು ಹೋದಾಗ ತಾನು 2 ತಿಂಗಳ

ಗರ್ಭಿಣಿಯೆಂದು ತಿಳಿದಿದ್ದು, ಪರೀಕ್ಷೆಯ ನಂತರ ಮತ್ತೆ ಸಾಂತ್ವನ ಕೇಂದ್ರಕ್ಕೆ ಹಿಂದಿರುಗಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆಃ**-15 :** ಪ್ರಾ.ಸಾ.-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ವೈದ್ಯಕೀಯ ಪರೀಕ್ಷೆ ಮಾಡಿದ 2-3 ದಿನಗಳ ನಂತರ ತನ್ನನ್ನು ಬೆಂಗಳೂರಿನ ನ್ಯಾಯಾಲಯಕ್ಕೆ ಕರೆದುಕೊಂಡು ಹೋಗಿ ವನಿತಾ ಎಂಬುವ ಮಹಿಳಾ ಪೇದೆ ತಾನು ಹೇಳಿಕೊಟ್ಟಂತೆ ನ್ಯಾಯಾಧೀಶರ ಮುಂದೆ ಹೇಳಬೇಕೆಂದು ಇಲ್ಲವಾದರೆ ತನ್ನ ಮೇಲೆಯೇ ದೂರು ದಾಖಲಿಸಿ ಒಳಗೆ ಹಾಕಿಸುತ್ತೇನೆಂದು ಹೆದರಿಸಿದ್ದು ಅದರಂತೆಯೇ ತಡನು ಅವರು ಹೇಳಿದಂತೆ ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆಃ**-16 :** ಪ್ರಾ.ಸಾ.-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಮಕ್ಕಳ ಕಲ್ಯಾಣ ಸಮಿತಿಯಿಂದ ಸಮ್ಮತಿ ಪಡೆದು ತನ್ನ ಗರ್ಭಪಾತ ಮಾಡಿಸಲು ಹೇಳಿ, ತನ್ನನ್ನು ವಾಣಿ ವಿಲಾಸ್ ಆಸ್ಪತ್ರೆಗೆ ಕಳುಹಿಸಿ ಗರ್ಭಪಾತ ಮಾಡಿಸಿದರು, ಆದರೆ 1 ವಾರ ಆಸ್ಪತ್ರೆಯಲ್ಲಿದ್ದರೂ ಹೆಬ್ಬಾಳ ಪೊಲೀಸರೂ ಯಾರೂ ಬಂದು ತನಗೆ ಸಹಾಯ ಮಾಡಲಿಲ್ಲ, ನಂತರ ತನ್ನ ತಂದೆ ತಾಯಿಯೇ ಚನ್ನಪಟ್ಟಣ ಪೊಲೀಸರ ಬಳಿ ಹೋಗಿ ಕೇಳಿಕೊಂಡು ಚನ್ನಪಟ್ಟಣದಿಂದ ಪೊಲೀಸರು ಆಸ್ಪತ್ರೆಗೆ ಬಂದು ತನ್ನನ್ನು ಬಿಡುಗಡೆಗೊಳಿಸಿ ಮನೆಗೆ ಕಳುಹಿಸಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆಃ**-17 :** ಪ್ರಾ.ಸಾ.-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ04.05.2021 ರಂದು ಬೆಳಿಗ್ಗೆ 3 ನೇ ಆರೋಪಿಯ ಮನೆಗೆ ತನ್ನನ್ನು ಕರೆದುಕೊಂಡು ಹೋಗಿ ತಾನು ತೋರಿಸಿದಂತೆ ಚಾಸಾ.8 ಮತ್ತು 9 ರವರ ಸಮಕ್ಷಮ ಪೊಲೀಸರು ಪಂಚನಾಮೆ ಮಾಡಿದರು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ-**18** : ಫ್ರಾ.ಸಾ.-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಮಹಜರ್ ನಲ್ಲಿರುವ ವಿಷಯಗಳು ತನಗೆ ಗೊತ್ತು, 1 ನೇ ಆರೋಪಿ ತನ್ನ ಆಕಾಶ ನೀಲಿ ಬಣ್ಣದ ಎಂಐ 6 ಆ್ಯಂಡ್ರಾಯ್ಡ್ ಮೊಬೈಲ್ ಫೋನನ್ನೂ ಸಹ ಕಿತ್ತುಕೊಂಡಿದ್ದು ಈಗಲೂ ಅದು ಆತನ ಬಳಿಯೇ ಇದೆ. ತನ್ನ ಮೊಬೈಲ್ ಸಂಖ್ಯೆ7483089114, ಮಹಜರ್ ಸಮಯದಲ್ಲಿ ಭಾವಚಿತ್ರಗಳನ್ನು ತೆಗೆಯಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ-**19** : ಫ್ರಾ.ಸಾ.-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ವಾಣಿ ವಿಲಾಸ್ ಆಸ್ಪತ್ರೆಯಲ್ಲಿ ತನ್ನ ರಕ್ತ ಶೇಖರಣೆ ಮಾಡಿದ್ದು, ಬಟ್ಟೆಗಳನ್ನೂ ವೈದ್ಯರಿಗೆ ನೀಡಿರುತ್ತೇನೆ, 3 ಜನ ಆರೋಪಿಗಳು ತನ್ನನ್ನು ಮುಸ್ಲಿಂ ಜನಾಂಗಕ್ಕೆ ಪರಿವರ್ತನೆಯಾಗುವಂತೆಯೂ ಸಹ ಒತ್ತಾಯಿಸುತ್ತಿದ್ದರು, ಈ ಎಲ್ಲಾ ವಿಷಯಗಳನ್ನು ತಾನು ಹೆಬ್ಬಾಳ ಮತ್ತು ಚನ್ನಪಟ್ಟಣ ಪೊಲೀಸ್ ಠಾಣೆಯಲ್ಲಿ ಹೇಳಿದ್ದೆ, ತನಗೆ 1 ನೇ ಆರೋಪಿ ಯಾವುದೇ ವಿಷಯ ಹೇಳದಂತೆ ಹೆದರಿಸಿದ್ದರಿಂದ ಸ್ವಲ್ಪ ವಿಷಯಗಳನ್ನು ಮಾತ್ರ ಪೊಲೀಸರ ಮುಂದೆ ಹೇಳಿದ್ದು ಇತರೆ ವಿಷಯಗಳನ್ನು ಹೇಳಿರಲಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ-**20** : ಫ್ರಾ.ಸಾ.**-3,** ಗೀತಾ ರವರು ತಮ್ಮ ಸಾಕ್ಷ್ಯದಲ್ಲಿ ತನ್ನ ಮಗಳು ಆರೋಪಿಗಳಿಂದ ಅವಳಿಗೆ ಆದ ತೊಂದರೆ ಮತ್ತು ಆರೋಪಿಗಳು ಆಕೆಯ ವಿರುದ್ಧ ಎಸಗಿದ ಕೃತ್ಯದ ಬಗ್ಗೆ ತನಗೆ ಹೇಳಿದ್ದು, ಆರೋಪಿಗಳು ಯಾವುದೇ ವಿಷಯಗಳನ್ನು ತಮಗೆ ಹೇಳಿದರೆ 3 ಜನರನ್ನು ಸಾಯಿಸುತ್ತೇವೆಂದು ಹೆದರಿಸಿದ್ದರು ಎಂದು ಹೇಳಿದಳು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ-**21** : ಫ್ರಾ.ಸಾ.-3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ09.03.2021 ರ ಬೆಳಿಗ್ಗೆ 9.30 ಕ್ಕೆ ಚಾಸಾ.1 ಮತ್ತು 2 ರವರು ಚನ್ನಪಟ್ಟಣದ ಮಂಗಳೇಶ್ವರ ದೇವಸ್ಥಾನಕ್ಕೆ ಹೋಗಿ, ತನ್ನ ಪತಿ ಚಾಸಾ.1 ಮಾತ್ರ ಮನೆಗೆ ಬೆಳಿಗ್ಗೆ ಸುಮಾರು 10.00 ಗಂಟೆಗೆ ಹಿಂದಿರುಗಿದ್ದು,

ಚಾಸಾ.2 ರವರನ್ನು ಯಾರೋ 3 ಜನ ಅಪರಿಚಿತರು ಕಾರಿನಲ್ಲಿ ದೇವಸ್ಥಾನದ ಹಿಂಭಾಗದಿಂದ ಕರೆದುಕೊಂಡು ಹೋದರು ಎಂದು ಹೇಳಿದರು, ಈ ಹಿಂದೆಯೂ ದಿಃ26.02.2021 ರಂದು ಸಂಜೆ ಮದುವೆಗೆಂದು ಮನೆಯ ಬಳಿಯೇ ಒಂದು ಛತ್ರಕ್ಕೆ ಹೋಗಿದ್ದು, ಮನೆಗೆ ಮಾರನೇ ದಿನವೂ ಬರಲಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆಃ-**22** : ಪ್ರಾ.ಸಾ.-3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆ ಕಾರಣ ತಾವು ಮಗಳು ಕಾಣೆಯಾಗಿದ್ದಾಳೆಂದು ಹೆಬ್ಬಾಳ ಠಾಣೆಯಲ್ಲಿ ದಿಃ27.02.2021 ರಂದು ಮಧ್ಯಾಹ್ನ 3.00 ಗಂಟೆಗೆ ದೂರು ನೀಡಿದ್ದು, ಅದೇ ದಿನ ಸಂಜೆ 7.00 ಗಂಟೆಗೆ ಮಗಳು ಮನೆಗೆ ಹಿಂದಿರುಗಿದಳು, ತಾವು ಎಲ್ಲಿಗೆ ಹೋಗಿದ್ದೆ ಏನಾಯಿತೆಂದು ಕೇಳಿದಾಗ ನಿಮಗೆ ಏನಾದರೂ ಮಾಡುತ್ತಾರೆ, ತಾನು ಹೇಳುವುದಿಲ್ಲ ಎಂದು ಹೇಳಿದ್ದಳು, ನಂತರ ತಾವು ಚನ್ನಪಟ್ಟಣಕ್ಕೆ ಕುಟುಂಬ ಸಮೇತ ಶಿಫ್ಟ್ ಆದೆವು, ಆ ಕಾರಣಕ್ಕೆ ಮತ್ತೆ ಹೆಬ್ಬಾಳ ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿದೆವು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆಃ-**23** : ಪ್ರಾ.ಸಾ.-3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ 4 ದಿನಗಳಾದ ಮೇಲೆ ಪೊಲೀಸ್ ಠಾಣೆಯಿಂದ ಕರೆ ಮಾಡಿ, ತನ್ನ ಮಗಳು ಸಿಕ್ಕಿದ್ದು ಬಾಲಮಂದಿರದಲ್ಲಿದ್ದಾಳೆಂದು ಹೇಳಿದರು, ನಂತರ ಮಗಳನ್ನು ಭೇಟಿ ಮಾಡಿ ಪ್ರಕರಣದ ವಿಷಯ ತಿಳಿದಿದ್ದು, 2 ನೇ ಬಾರಿ ಘಟನೆ ನಡೆದ 15 ದಿನಗಳ ನಂತರ ಬೆಂಗಳೂರಿನ ವಾಣಿ ವಿಲಾಸ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಮಗಳು 8 ವಾರಗಳ ಗರ್ಭಿಣಿ ಎಂದು ತಿಳಿದು, ಗರ್ಭಪಾತ ಮಾಡಲು ಕೋರಿದ್ದು, ಅದರಂತೆ ಮಗಳಿಗೆ ಗರ್ಭಪಾತ ಮಾಡಲಾಯಿತು, ಈ ಎಲ್ಲಾ ವಿಷಯಗಳನ್ನು ತಾನು ಪೊಲೀಸರ ಬಳಿ ಹೇಳಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆಃ-**24** : ಪ್ರಾ.ಸಾ.-3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ04.05.2021 ರಂದು ಜಕ್ಕೂರಿನ ಬಳಿ ಶ್ರೀರಾಂಪುರದಲ್ಲಿ ಒಂದು ಮನೆಗೆ ಕರೆದುಕೊಂಡು ಹೋಗಿದ್ದು ಅಲ್ಲಿ

ತನ್ನ ಮಗಳು ಸಂತ್ರಸ್ಥೆ ತೋರಿಸಿದಂತೆ ಪೊಲೀಸರು ಪರಿಶೀಲಿಸಿ ಬರೆದು ತನ್ನ ಸಹಿ ಪಡೆದಿರುತ್ತಾರೆ. ಸ್ಥಳ ಮಹಜರ್ ನಲ್ಲಿರುವ ವಿಷಯಗಳು ತನಗೆ ಗೊತ್ತು, ಸ್ಥಳ ಮಹಜರ್ ಸಮಯದಲ್ಲಿ ಅದೇ ಮನೆಯಲ್ಲಿ ಭಾವಚಿತ್ರಗಳನ್ನು ತೆಗೆಯಲಾಗಿರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆಃ**-25 :** ಪ್ರಾ.ಸಾ.**-4,** ವಿಶ್ವನಾಥ್ ರವರು ತಮ್ಮ ಸಾಕ್ಷ್ಯದಲ್ಲಿ ದಿಃ09.03.2021 ರಂದು ಬೆಳಗ್ಗೆ 9.00 ಗಂಟೆ ಸಮಯದಲ್ಲಿ ತಾನು ಮತ್ತು ಚಾಸಾ.12 ರವರು ಕೂಡ್ಲೂರಿನ ಮಂಗಳೇಶ್ವರ ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡಿಕೊಂಡು ದೇವಸ್ಥಾನದ ಬಳಿ ಕೂತಿದ್ದಾಗ ಚಾಸಾ.1 ರಿಂದ 3 ರವರು ದೇವಸ್ಥಾನಕ್ಕೆ ಪೂಜೆ ಮಾಡಿಸಲು ಬಂದಿದ್ದು, ಆಗ ಕೆಂಪು ಬಣ್ಣದ ಇಂಡಿಕಾ ಕಾರೊಂದು ದೇವಸ್ಥಾನದ ಬಲಭಾಗದಲ್ಲಿ ನಿಂತಿದ್ದನ್ನು ನೋಡಿದ್ದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆಃ**-26 :** ಪ್ರಾ.ಸಾ.-4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಕಾರಿನ ಒಳಭಾಗದಲ್ಲಿ ಇಬ್ಬರು ಮತ್ತು ಹೊರಭಾಗದಲ್ಲಿ ಒಬ್ಬರು ಮಾತನಾಡಿಕೊಂಡು ನಿಂತಿದ್ದಾಗ ಒಬ್ಬ ವ್ಯಕ್ತಿ ಚಾಸಾ.2 ರವರನ್ನು ಕೈ ಹಿಡಿದುಕೊಂಡು ಎಳೆದುಕೊಂಡು ಹೋದರು, ತಾನು ಅದನ್ನು ಸುಮಾರು 100 ಮೀಟರ್ ಅಂತರದಿಂದ ನೋಡಿದೆ, ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಇವರೇ ಎಂದು ನುಡಿದಿದ್ದು, ಈ ಎಲ್ಲಾ ವಿಷಯಗಳನ್ನು ತಾನು ಪೊಲೀಸರಿಗೆ ಹೇಳಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆಃ**-27 :** ಪ್ರಾ.ಸಾ.**-5,** ರಮೇಶ್ ರವರು ತಮ್ಮ ಸಾಕ್ಷ್ಯದಲ್ಲಿ ದಿಃ10.03.2021 ರಂದು ಬೆಳಿಗ್ಗೆ 10 ರಿಂದ 11 ಗಂಟೆ ಸಮಯದಲ್ಲಿ ತಮ್ಮ ಊರಿನ ಮಂಗಳೇಶ್ವರ ದೇವಸ್ಥಾನದ ಬಳಿ ಪೊಲೀಸರು ಬಂದಿದ್ದು, ತಾನು ಸ್ಥಳದಲ್ಲಿದ್ದಾಗ ಸ್ಥಳ ಪಂಚನಾಮೆ ಮಾಡಿ ತನ್ನ ಮತ್ತು ಚಾಸಾ.5 ರವರ ಸಹಿ ಪಡೆದು ಸದರಿ ಸಮಯದಲ್ಲಿ ಭಾವಚಿತ್ರಗಳನ್ನು ತೆಗೆದಿರುತ್ತಾರೆ, ಅವುಗಳಲ್ಲಿ ತಾನು ಇರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ**-28 :** ಫ್ರಾ.ಸಾ.**-6,** ಗಾಯಿತ್ರಿ ರವರು ತಮ್ಮ ಸಾಕ್ಷ್ಯದಲ್ಲಿ 2018 ರಿಂದ ತಾನು ಚನ್ನ ಪಟ್ಟಣ ಗ್ರಾಮಾಂತರಠಾಣೆಯಲ್ಲಿ ಕೆಲಸ ಮಾಡುತ್ತಿದ್ದೆ. ದಿಃ04.05.2021 ರಂದು ಆರೋಪಿ ಮನೆಯಾದ ನಂ.91 ತಿರುಪತಿ ಪಾಳ್ಯ, ಜಕ್ಕೂರು, ಬೆಂಗಳೂರು ನಲ್ಲಿರುವ ಚಾಸಾ.2 ರವರು ತೋರಿಸಿದ ಸ್ಥಳದಲ್ಲಿ ಮಧ್ಯಾಹ್ನ 01.45 ರಿಂದ 02.30 ಗಂಟೆಯವರೆಗೆ ಮಹಜರ್ ಮಾಡಿ ಸದರಿ ಸಮಯದಲ್ಲಿ ಭಾವಚಿತ್ರಗಳನ್ನು ತೆಗೆದಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ**-29 :** ಫ್ರಾ.ಸಾ.**-7,** ಅಂಬರೀಶ್ ರವರು ತಮ್ಮ ಸಾಕ್ಷ್ಯದಲ್ಲಿ ದಿಃ04.05.2021 ರಂದು ಮಧ್ಯಾಹ್ನ 02.00 ಗಂಟೆ ಸಮಯದಲ್ಲಿ ಶ್ರೀರಾಂಪುರ ಮುಖ್ಯರಸ್ತೆಯಲ್ಲಿರುವ ವಿಮಲಮ್ಮನವರ ಬಾಡಿಗೆ ಮನೆಯಲ್ಲಿ ಮಹಜರ್ ಮಾಡಿದ್ದು, ಅದು ತಮ್ಮ ಜಮೀನಿನಿಂದ ಸುಮಾರು 500 ಮೀಟರ್ ಇದ್ದು, ಮಹಜರ್ ಗಾಗಿ ಪೊಲೀಸರು ಬಂದಿದ್ದಾಗ ಸದರಿ ದಾಖಲೆಗೆ ಸಹಿ ಮಾಡಿರುತ್ತೇನೆ, ಸದರಿ ಸಮಯದಲ್ಲಿ ಭಾವಚಿತ್ರಗಳನ್ನು ತೆಗೆದಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ**-30 :** ಫ್ರಾ.ಸಾ.**-8,** ಮುನಿರಾಜು ರವರು ತಮ್ಮ ಸಾಕ್ಷ್ಯದಲ್ಲಿ ದಿಃ04.05.2021 ರಂದು ಮಧ್ಯಾಹ್ನ 1.40 ರಿಂದ 2.00 ಗಂಟೆ ಸಮಯದಲ್ಲಿ ಶ್ರೀರಾಂಪುರದಲ್ಲಿರುವ ಕೃಷ್ಣಪ್ಪ ಮತ್ತು ವಿಮಲಮ್ಮನವರ ಮನೆಯಲ್ಲಿ ಗ್ಯಾರೇಜ್ ಇದ್ದು ಅಲ್ಲಿ ಮಹಜರ್ ಗೆ ಸಹಿ ಮಾಡಿದ್ದು, ಚಾಸಾ.2 ರವರ ತಂದೆ ಹಾಗೂ ಪೊಲೀಸರು ತನಗೆ ಕರೆ ಮಾಡಿ ಸದರಿ ಸ್ಥಳಕ್ಕೆ ಬರುವಂತೆ ಕರೆದಿದ್ದು, ಸದರಿ ಸಮಯದಲ್ಲಿ ಚಾ.ಸಾ.2 ರವರು ಇದ್ದು, ಪೊಲೀಸರು ಸ್ಥಳದಲ್ಲಿ ಮಹಜರ್ ಮಾಡಿದ್ದು, ಚಾಸಾ.1, 2 ಮತ್ತು ಪೊಲೀಸರು ಸ್ಥಳವನ್ನು ತೋರಿಸಿದ್ದು, ಅದೇ ಸಮಯದಲ್ಲಿ ಪೊಲೀಸರು ಭಾವಚಿತ್ರಗಳನ್ನು ತೆಗೆದಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ**-31 :** ಫ್ರಾ.ಸಾ.**9,** ಡಾ. ಸುಮಾ ಕೆ. ಎಸ್**.** ರವರು ತಮ್ಮ ಸಾಕ್ಷ್ಯದಲ್ಲಿ ತಾನು ಬೆಂಗಳೂರಿನ ವಾಣಿ ವಿಲಾಸ ಆಸ್ಪತ್ರೆಯಲ್ಲಿ ಸನ್ 2017 ರಿಂದ ಮಹಿಳಾ ವೈದ್ಯಾಧಿಕಾರಿಣಿಯಾಗಿ ಕೆಲಸ ಮಾಡುತ್ತಿದ್ದೇನೆ. ದಿಃ15.03.2021 ರಂದು ಮಧ್ಯಾಹ್ನ 4.00 ಗಂಟೆ ಸಮಯದಲ್ಲಿ ಹೆಬ್ಬಾಳ ಠಾಣೆಯ ಪೊಲೀಸರು ತಮ್ಮ ಮಹಿಳಾ ಪಿಸಿ 17196 ಅಕ್ಕಮಾಹದೇವಿ ಇವರೊಂದಿಗೆ ನೊಂದ ಬಾಲಕಿಗೆ ವೈದ್ಯಕೀಯ ಪರೀಕ್ಷೆಗೆಂದು ಒಳಪಡಿಸಲು ತನ್ನಲ್ಲಿಗೆ ಕಳುಹಿಸಿದಾಗ ಅವಳೊಂದಿಗೆ ಆಕೆಯ ತಾಯಿ ಶ್ರೀಮತಿ. ಗೀತಾ ರವರೂ ಸಹ ಬಂದಿದ್ದರು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ**-32:** ಫ್ರಾ.ಸಾ.**9** ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ನೊಂದ ಬಾಲಕಿ ಮತ್ತು ಅವಳ ತಾಯಿ ಗೀತಾ ರವರ ಸಮ್ಮತಿಯನ್ನು ಪಡೆದು ವಿಚಾರಿಸಿದಾಗ, ನೊಂದ ಬಾಲಕಿಯು, ಸುಮಾರು 4 ತಿಂಗಳುಗಳಿಂದ ಜಾವೇದ್ ಎಂಬಾತನು ತನ್ನ ಗೆಳೆಯನಾಗಿದ್ದು ಆತನೊಂದಿಗೆ ದಿಃ26.02.2021 ರಂದು ಹೋಗಿದ್ದು, ದಿಃ27.02.2021 ರಂದು ಬೆಂಗಳೂರಿನ ಆರತಿ ನಗರದ ಪೊಲೀಸರು ಅವಳನ್ನು ಪುನಃ ಮರಳಿ ಅವಳ ಪೋಷಕರ ಮನೆಗೆ ಕಳಿಸಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ**-33:** ಫ್ರಾ.ಸಾ.**9** ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಜಾವೇದ್ ಗೆ ಈಗಾಗಲೇ ಬೇರೆ ವಿವಾಹವಾಗಿ ಒಂದು ಮಗು ಇದ್ದು, ನೊಂದ ಬಾಲಕಿಯು ಸದರಿ ಜಾವೇದ್ ಗೆ ಇನ್ಸ್ಟಾಗ್ರಾಂ ಮೂಲಕ ಸಂದೇಶಗಳನ್ನು ತನ್ನ ಸ್ಥಿತಿಗತಿಗಳನ್ನು ಕಳಹಿಸುತ್ತಿದ್ದು, ದೇವಸ್ಥಾನಕ್ಕೆ ಹೋಗುವ ನೆಪದಲ್ಲಿ ಕೂಡ್ಲೂರು ಗ್ರಾಮದಿಂದ ನೊಂದ ಬಾಲಕಿಯು ಜಾವೇದ್ ನೊಂದಿಗೆ ಓಡಿ ಹೋಗಿದ್ದು, ದಿಃ09.03.2021 ರಂದು ಬೆಳಿಗ್ಗೆ 10.30 ಕ್ಕೆ ಶಿವಮೊಗ್ಗಕ್ಕೆ ಹೋಗಿ ಅಲ್ಲಿ ಗೆಳೆಯರ ಮನೆಯಲ್ಲಿ ವಾಸವಾಗಿದ್ದು, 5 ದಿನಗಳವರೆಗೆ ಜಾವೇದ್ ನೊಂದಿಗೆ ಲೈಂಗಿಕ ಸಂಪರ್ಕ ಹೊಂದಿದ್ದು ಕೊನೆಯ ಬಾರಿಗೆ ದಿಃ13.03.2021 ರಂದು ಆತನೊಂದಿಗೆ ಲೈಂಗಿಕ ಸಂಪರ್ಕ ಹೊಂದಿದ್ದು, ದಿಃ14.03.2021 ರಂದು ಪೊಲೀಸರು ಅಲ್ಲಿಗೆ ಬಂದು ಅವರಿಬ್ಬರನ್ನೂ ಮರಳಿ ಕರೆತಂದಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ:-**34:** ಫ್ರಾ.ಸಾ.**9** ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನೊಂದ ಬಾಲಕಿ/ಚಾಸಾ.2 ರವರನ್ನು ವೈದ್ಯಕೀಯವಾಗಿ ಪರೀಕ್ಷಿಸಲಾಗಿ, ಅವಳ ಮೈಕಟ್ಟು ಸಾಧಾರಣವಾಗಿತ್ತು, ಆಕ್ಸಲರಿ ಮತ್ತು ಪ್ಯೂಬಿಕ್ ಹೇರ್‌ಗಳು ಶೇವ್ ಮಾಡಿದ್ದವು, ಎದೆಯ ಬೆಳವಣಿಗೆ ಸಾಮಾನ್ಯವಾಗಿ ಇದ್ದು, 5 ನೇ ಟ್ಯಾನರ್ ಹಂತದಲ್ಲಿ ಇತ್ತು, ಅವಳ ಕೊನೇಯ ಋತುಸ್ರಾವದ ದಿಃ19.01.2021 ಇದ್ದು ಅವಳ ವಯಸ್ಸು 16 ಇದ್ದು ಯಾವುದೇ ಬಾಹ್ಯ ಗಾಯಗಳು ಕಂಡುಬಂದಿರುವುದಿಲ್ಲ ಅವಳನ್ನು ಲೋಕಲ್ ಎಕ್ಸಾಮಿನೇಷನ್‌ಗೆ ಒಳಪಡಿಸಿ ಎಲ್ಲವೂ ಸಾಮಾನ್ಯ ಸ್ಥಿತಿಯಲ್ಲಿರುವುದು ಕಂಡುಬಂದಿರುತ್ತದೆ ಆದರೆ ಹೈಮನ್ ಮಾತ್ರ ಸುಸ್ಥಿತಿಯಲ್ಲಿ ಇರಲಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ:-**35:** ಫ್ರಾ.ಸಾ.**9** ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸ್ವಾಬ್ಸ್ ಮತ್ತು ಸ್ಮಿಯರ್ಸ್ ಗಳನ್ನು ಅವಳ ಸರ್ವಿಕ್ಸ್ ಮತ್ತು ವೆಜಿನಾಗಳಿಂದ ತೆಗೆದುಕೊಳ್ಳಲಾಗಿದ್ದು, ದಿಃ27.03.2021 ರಂದು ಅವಳನ್ನು ಪ್ರೆಗ್ನೆನ್ಸಿ ಟೆಸ್ಟಿಗೆ ಒಳಪಡಿಸಿದಾಗ ಅದು ಪಾಸಿಟಿವ್ ಬಂದಿರುತ್ತದೆ. ನಂತರ ಅವಳ ಸಮ್ಮತಿಯ ಮೇರೆಗೆ ಪೊಲೀಸರಿಗೆ ನೀಡಿ, ಮೆಡಿಕಲ್ ಪ್ರೆಗ್ನೆನ್ಸಿ ಟರ್ಮಿನೇಷನ್(ಎಂಪಿಸಿ) ಅನ್ನು ದಿಃ30.03.2021 ರಂದು ಬೆಳಿಗ್ಗೆ ಸುಮಾರು 8.00 ಗಂಟೆ ಸಮಯದಲ್ಲಿ ಮಾಡಿ, ಅದನ್ನು ಎಫ್‌ಎಸ್‌ಎಲ್‌ಗೆ ಪರೀಕ್ಷೆಗೆಂದು ಕಳಿಸಿ, ಆ ಕುರಿತು ಒಂದು ವರದಿಯನ್ನು ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ:-**36:** ಫ್ರಾ.ಸಾ.**9** ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ15.03.2021 ರಂದು ಮೊದಲ ಬಾರಿಗೆ ನೊಂದ ಬಾಲಕಿ/ಚಾಸಾ.2 ರವರು ತಮ್ಮಲ್ಲಿಗೆ ಬಂದಾಗ ಅವಳನ್ನು ವೈದ್ಯಕೀಯವಾಗಿ ಪರೀಕ್ಷಿಸಿ, ಅವಳಿಂದ ಒಂದು ಪ್ಯಾಂಟಿ, ಒಂದು ಕಪ್ಪು ಬಣ್ಣದ ಬ್ರಾ, ಒಂದು ಕಪ್ಪು ಬಣ್ಣದ ಜೀನ್ಸ್, ಬೂದುಬಣ್ಣದ ಟೀ ಶರ್ಟ್, ಕಪ್ಪು ಬಣ್ಣದ ಟೀ ಶರ್ಟ್, ಒಂದು ಕಂದುಬಣ್ಣದ ಫುಲ್ ಓವರ್, ಸರ್ವೈಕಲ್ ಸ್ವಾಬ್, ಸರ್ವೈಕಲ್ ಸ್ಮಿಯರ್, ವೆಜೈನಲ್ ಸ್ವಾಬ್ ಮತ್ತು ವೆಜೈನಲ್ ಸ್ಮಿಯರ್‌ಗಳನ್ನು ಶೇಖರಿಸಿಕೊಂಡಿದ್ದು, ಅವುಗಳನ್ನು

ಎಫ್.ಎಸ್.ಎಲ್. ಸೀಲ್‌ಗಳು ಉಳ್ಳ ಸೀಲ್ ಮಾಡಿದ ಸ್ಥಿತಿಯಿಂದ ನ್ಯಾಯಾಲಯದಲ್ಲಿ ತೆಗೆದು ತೋರಿಸಿದ್ದು, ಅವುಗಳನ್ನು ಮು.ಮಾ.1 ರಿಂದ 10 ಎಂದು ಗುರುತಿಸಿದ್ದು, ಅವುಗಳ ಮೇಲೆ ತನ್ನ ಸಹಿಯುಳ್ಳ ಚೀಟಿಗಳು ಇದ್ದು, ಅದಕ್ಕೆ ಸಂಬಂಧಿಸಿದಂತೆ ಒಂದು ವೈದ್ಯಕೀಯ ದಾಖಲಾತಿಯನ್ನು ನೀಡಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆಃ**-37:** ಪ್ರಾ.ಸಾ.**9** ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ27.03.2021 ರಿಂದ ದಿಃ01.04.2022 ರವರೆಗೆ ನೊಂದ ಬಾಲಕಿ/ಚಾಸಾ.2 ರವರನ್ನು ಒಳರೋಗಿಯಾಗಿ ತಮ್ಮ ಆಸ್ಪತ್ರೆಯಲ್ಲಿ ಇಟ್ಟುಕೊಂಡು ಅವರ ಎಂ.ಪಿ.ಟಿ. ಮಾಡಿ, ನಂತರ ಸ್ಯಾಂಪಲ್‌ಗಳನ್ನು ಶೇಖರಿಸಿಕೊಂಡು, ಅವುಗಳನ್ನು ಎಫ್.ಎಸ್.ಎಲ್.ಗೆ ಪರೀಕ್ಷೆಗೆಂದು ಕಳಿಸಿರುತ್ತೇವೆ, ಆ ಕುರಿತು ಒಂದು ವೈದ್ಯಕೀಯ ದಾಖಲಾತಿಯನ್ನು ನೀಡಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆಃ**-38:** ಪ್ರಾ.ಸಾ.**9** ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ನಿ.ಪಿ.15 ಕ್ಕೆ ಸಂಬಂಧಿಸಿದಂತೆ ಎಫ್.ಎಸ್.ಎಲ್. ವರದಿ ಬರುವವರೆಗೆ ತನ್ನ ಅಂತಿಮ ಅಭಿಪ್ರಾಯವನ್ನು ತಡೆದು ಒಂದು ತಾತ್ಪೂರ್ತಿಕ ವರದಿಯನ್ನು ನೀಡಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆಃ**-39:** ಪ್ರಾ.ಸಾ.**10,** ಸುದರ್ಶನ್ ರವರು ತಮ್ಮ ಸಾಕ್ಷ್ಯದಲ್ಲಿ 2021 ರ ಮಾರ್ಚ್ ಮಾಹೆಯಲ್ಲಿ ಒಂದು ದಿನ ಪೊಲೀಸರು ಬೆಂಗಳೂರಿನ ಹೆಬ್ಬಾಳ ಪೊಲೀಸ್ ಠಾಣೆಯಲ್ಲಿ ಒಂದು ಟಾಟಾ ಇಂಡಿಕಾ ಕಾರನ್ನು ತಮ್ಮ ಸಮಕ್ಷಮದಲ್ಲಿ ಅಮಾನತ್ತು ಪಡಿಸಿಕೊಂಡು ಒಂದು ಅಮಾನತ್ತು ಪಂಚನಾಮೆ ಮಾಡಿ, ತಮ್ಮ ಸಹಿ ಪಡೆದಿದ್ದು, ಕಾರಿನ ಎರಡು ವರ್ಣರಂಜಿತ ಛಾಯಾಚಿತ್ರಗಳನ್ನು ನೋಡಿ ಗುರುತಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ-**40:** ಪ್ರಾ.ಸಾ.**11,** ಸಜ್ಜು ಯಾದವ್ ರವರು ತಮ್ಮ ಸಾಕ್ಷ್ಯದಲ್ಲಿ ದಿಃ21.03.2021 ರಂದು ಪೊಲೀಸರು ಒಂದು ವಾಹನ ಅಮಾನತ್ತು ಪಡಿಸಿಕೊಳ್ಳುವ ವಿಚಾರದಲ್ಲಿ ಒಂದು ದಸ್ತಾವೇಜಿನ ಮೇಲೆ ತನ್ನ ಸಹಿಯನ್ನು ಪಡೆದಿದ್ದು, ಒಬ್ಬ ಬಾಲೆಯ ಮೇಲೆ ಅತ್ಯಾಚಾರ ಎಸಗಿರುವ ವಿಚಾರವಾಗಿ ಸದರಿ ವಾಹನವನ್ನು ಹಾಜರು ಪಡಿಸುತ್ತಿರುವುದಾಗಿ ಹೇಳಿದ್ದು, ಕಾರಿಗೆ ಸಂಬಂಧಿಸಿದ ಎರಡು ವರ್ಣರಂಜಿತ ಛಾಯಾಚಿತ್ರಗಳನ್ನು ನೋಡಿ ಗುರುತಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ-**41:** ಪ್ರಾ.ಸಾ.**12,** ಹನುಮಂತರಾಯಪ್ಪ ಎಸ್. ರವರು ತಮ್ಮ ಸಾಕ್ಷ್ಯದಲ್ಲಿ ದಿಃ05.03.2021 ರಂದು ತಾನು ಹೆಬ್ಬಾಳ ಪೊಲೀಸ್ ಠಾಣೆಯಲ್ಲಿ ಎಸ್.ಹೆಚ್.ಒ/ ಎ.ಎಸ್.ಐ. ಎಂದು ಕರ್ತವ್ಯ ನಿರ್ವಹಿಸುತ್ತಿದ್ದಾಗ, ಸಾಯಂಕಾಲ ಸುಮಾರು 4.00 ಗಂಟೆ ಸಮಯದಲ್ಲಿ ಚಾಸಾ.1 ರವರು ತನ್ನಲ್ಲಿಗೆ ಭೇಟಿ ನೀಡಿ, ತನ್ನ ಹಿರಿಯ ಮಗಳು, ವಯಸ್ಸು 17 ವರ್ಷದವಳಿದ್ದು, ಅವಳು ಕಾಣೆಯಾಗಿರುತ್ತಾಳೆಂದು ಒಂದು ಪಿರ್ಯಾದನ್ನು ಸಲ್ಲಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ-**42:** ಪ್ರಾ.ಸಾ.**12** ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಪಿರ್ಯಾದನ್ನು ಸಲ್ಲಿಸಿದ್ದರ ಮೇರೆಗೆ, ತಮ್ಮ ಹೆಬ್ಬಾಳ ಪೊಲೀಸ್ ಠಾಣೆ ಅಪರಾಧ ಸಂಖ್ಯೆ38/2021 ನ್ನು ಕಲಂ 363 ಐ.ಪಿ.ಸಿ. ಅಡಿಯಲ್ಲಿ ದಾಖಲಿಸಿಕೊಂಡು, ಸದರಿ ಮೂಲ ಪಿರ್ಯಾದಿ ಮತ್ತು ಪ್ರ.ವ.ವ.ಗಳನ್ನು ನ್ಯಾಯಾಲಯಕ್ಕೆ ಕಳುಹಿಸಿ, ಅವುಗಳ ಪ್ರತಿಗಳನ್ನು ತಮ್ಮ ಮೇಲಧಿಕಾರಿಗಳಿಗೆ ಮಾಹಿತಿಗೋಸ್ಕರ ರವಾನಿಸಿರುತ್ತೇನೆ ಎಂದು ಹಾಗೂ ಪ್ರಕರಣದ ಕಡತವನ್ನು ಮುಂದಿನ ತನಿಖೆಗೆಂದು ಚಾಸಾ.24 ರವರಿಗೆ ಹಸ್ತಾಂತರಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ-**43:** ಪ್ರಾ.ಸಾ.**13,** ಶಿವಕುಮಾರ್ ಹೆಚ್. ಎಂ. ರವರು ತಮ್ಮ ಸಾಕ್ಷ್ಯದಲ್ಲಿ ದಿಃ03.02.2020 ರಿಂದ ದಿಃ20.09.2021 ರವರೆಗೆ ತಾನು ಚನ್ನಪಟ್ಟಣದ ಗ್ರಾಮೀಣ

ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ. ಎಂದು ಕರ್ತವ್ಯ ನಿರ್ವಹಿಸುತ್ತಿದ್ದೆನು. ದಿಃ02.04.2021 ರಂದು ಬೆಂಗಳೂರಿನ ಹೆಬ್ಬಾಳದ ಅಪರಾಧ ಸಂಖ್ಯೆ38/2021 ರ ಕಡತವನ್ನು ಕೃತ್ಯ ನಡೆದ ಸ್ಥಳದ ವ್ಯಾಪ್ತಿಯ ಆಧಾರದ ಮೇಲೆ ಎಸ್.ಪಿ. ಆಫೀಸ್ ರವರಿಂದ ಬೆಳಿಗ್ಗೆ 11.30 ರ ಸಮಯದಲ್ಲಿ ಪಡೆದುಕೊಂಡು ಸಾಯಂಕಾಲ 4.00 ಗಂಟೆ ಸಮಯದಲ್ಲಿ ಅದೇ ದಿನ ತಮ್ಮ ಠಾಣಾ ಪ್ರಕರಣ ಸಂಖ್ಯೆ33/2021 ನ್ನು ದಾಖಲಿಸಿಕೊಂಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ**-44:** ಪ್ರಾ.ಸಾ.**13** ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ, ಸದರಿ ಪ್ರಕರಣ ವರ್ಗಾವಣೆಗೆ ಸಂಬಂಧಿಸಿದಂತೆ ವಿವರಣೆಯೊಂದಿಗೆ ಇದ್ದ ಒಂದು ಪತ್ರವನ್ನು ನೋಡಿ ಹಾಗೂ ಮೂಲ ಪ್ರ.ವ.ವ.ಯನ್ನು ನೋಡಿ ಗುರುತಿಸಿದ್ದು, ನಂತರ ಪ್ರಕರಣದ ಕಡತವನ್ನು ಮುಂದಿನ ತನಿಖೆಗೆಂದು ಚಾಸಾ.30 ರವರಿಗೆ ಹಸ್ತಾಂತರಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ**-45:** ಪ್ರಾ.ಸಾ.**14, ಶಿವಕುಮಾರ್ ಟಿ. ಬಿ.** ರವರು ತಮ್ಮ ಸಾಕ್ಷ್ಯದಲ್ಲಿ ದಿಃ27.11.2020 ರಿಂದ ಈರವರೆಗೆ ತಾನು ಚನ್ನಪಟ್ಟಣ ಗ್ರಾಮಾಂತರ ವೃತ್ತದಲ್ಲಿ ಸಿಪಿಐ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿಃ02.04.2021 ರಂದು ಪ್ರಸ್ತುತ ಪ್ರಕರಣದ ಕಡತವನ್ನು ಮುಂದಿನ ತನಿಖೆಗೆಂದು ಚಾಸಾ.29 ರವರಿಂದ ಪಡೆದಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ**-46:** ಪ್ರಾ.ಸಾ.**14** ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ03.04.2021 ರಂದು ನೊಂದ ಬಾಲಕಿ/ಚಾಸಾ.2 ರವರ ಭ್ರೂಣ ಮತ್ತು ಮಾದರಿ ರಕ್ತವನ್ನು ಬೆಂಗಳೂರಿನ ವಾಣಿ ವಿಲಾಸ ಆಸ್ಪತ್ರೆಯಲ್ಲಿ ವೈದ್ಯರು ಶೇಖರಿಸಿ ಇಟ್ಟಿದ್ದು, ಅವುಗಳನ್ನು ಚಾಸಾ.14 ಇವರ ಮುಖಾಂತರ ತರಿಸಿಕೊಂಡು ಅವುಗಳನ್ನು ತಮ್ಮ ಠಾಣಾ ಸ್ವತ್ತಿನ ಪಟ್ಟಿಗೆ ಅಳವಡಿಸಿಕೊಂಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ-**47:** ಫ್ರಾ.ಸಾ.**14** ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ07.04.2021 ರಂದು ಬೆಂಗಳೂರಿನ ಹೆಬ್ಬಾಳದ ಅಪರಾಧ ಸಂಖ್ಯೆಯಲ್ಲಿ ಅಮಾನತ್ತು ಪಡಿಸಿಕೊಂಡಿದ್ದ ಘಟನೆಗೆ ಉಪಯೋಗಿಸಿದ ಇಂಡಿಕಾ ಕಾರ್ ನಂಬರ್.ಕೆಎ-51, ಡಿ-0632 ನ್ನು ಚಾಸಾ.21 ರವರ ಮುಖಾಂತರ ಈ ಪ್ರಕರಣದಲ್ಲಿ ಸ್ವೀಕರಿಸಿಕೊಂಡು ಅದನ್ನು ತಮ್ಮ ಠಾಣಾ ಸ್ವತ್ತಿನ ಪಟ್ಟಿಗೆ ಅಳವಡಿಸಿಕೊಂಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ-**48:** ಫ್ರಾ.ಸಾ.**14** ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ08.04.2021 ರಂದು ತಮ್ಮ ಠಾಣಾ ಸ್ವತ್ತಿನ ಪಟ್ಟಿ ಅಡಿಯಲ್ಲಿ ಅಳವಡಿಸಿಕೊಂಡಿದ್ದ ಭ್ರೂಣ ಮತ್ತು ರಕ್ತದ ಮಾದರಿಗಳನ್ನು ಡಿ ಎನ್ ಎ ಪರೀಕ್ಷೆಗೆಂದು ಚಾಸಾ.23 ರವರ ಮುಖಾಂತರ ಬೆಂಗಳೂರಿಗೆ ಕಳುಹಿಸಿ ಕೊಟ್ಟಿದ್ದು, ಆ ಕುರಿತು, ಚಾಸಾ.23 ರವರು ಒಂದು ಸ್ವೀಕೃತಿ ಪತ್ರವನ್ನು ಎಫ್ ಎಸ್ ಎಲ್ ನಿಂದ ತಂದು ಹಾಜರುಪಡಿಸಿದ್ದು, ಅದನ್ನು ನೋಡಿ ಗುರುತಿಸುತ್ತಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ-**49:** ಫ್ರಾ.ಸಾ.**14** ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ10.04.2021 ರಂದು ನೊಂದ ಬಾಲಕಿ/ಚಾಸಾ.2 ರವರ ಹೇಳಿಕೆಯನ್ನು ಚಾಸಾ.26 ರವರ ಮುಖಾಂತರ ದಾಖಲಿಸಿಕೊಂಡು, ನಂತರ, ಅದೇ ದಿನ ಚಾಸಾ.1 ಮತ್ತು 3 ರವರ ಪುನರ್ ಹೇಳಿಕೆಗಳನ್ನೂ ಸಹ ದಾಖಲಿಸಿಕೊಂಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ-**50:** ಫ್ರಾ.ಸಾ.**14** ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ19.04.2021 ರಂದು ಪ್ರಸ್ತುತ 1 ನೇ ಆರೋಪಿತನ ವಿರುದ್ಧ ಬಾಡಿ ವಾರೆಂಟ್‌ನ್ನು ಈ ನ್ಯಾಯಾಲಯದ ಮುಾಲಕ ಪಡೆದು ಆತನನ್ನು ಬೆಂಗಳೂರಿನ ಕಾರಾಗೃಹದಿಂದ ತಂದು ಈ ಪ್ರಕರಣದಲ್ಲಿ

ಹಾಜರುಪಡಿಸಿ, ನ್ಯಾಯಾಂಗ ಬಂಧನಕ್ಕೆ ಒಳಪಡಿಸುವಂತೆ ಕೋರಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆಃ**-51:** ಪ್ರಾ.ಸಾ.**14** ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ28.04.2021 ರಂದು ಈ ನ್ಯಾಯಾಲಯದ ಪೂರ್ವಾನುಮತಿಯ ಮೇರೆಗೆ 1 ನೇ ಆರೋಪಿತನ ರಕ್ತದ ಮಾದರಿಯನ್ನು ನ್ಯಾಯಾಲಯದಲ್ಲಿ ಡಿ ಎನ್ ಎ ಪರೀಕ್ಷೆಗೆಂದು ವೈದ್ಯಾಧಿಕಾರಿಗಳ ಮುಖಾಂತರ ಸಂಗ್ರಹಿಸಿ ಅದನ್ನು ತಮ್ಮ ಠಾಣಾ ಸ್ವತ್ತಿನ ಪಟ್ಟಿಗೆ ಅಳವಡಿಸಿಕೊಂಡಿರುತ್ತೇನೆ. ನಂತರ ಅದೇ ದಿನ ಡಿ ಎನ್ ಎ ಪರೀಕ್ಷೆಗೆಂದು ಸಂಗ್ರಹಿರಿಸಿಕೊಂಡಿದ್ದ ಆರೋಪಿತನ ರಕ್ತದ ಮಾದರಿಯನ್ನು ಚಾಸಾ.23 ರವರ ಮುಖಾಂತರ ಬೆಂಗಳೂರಿನ ಎಫ್ ಎಸ್ ಎಲ್ ಗೆ ಕಳುಹಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆಃ**-52:** ಪ್ರಾ.ಸಾ.**14** ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಚಾಸಾ.23 ರವರು ಬೆಂಗಳೂರಿನ ಎಫ್ ಎಸ್ ಎಲ್ ನಿಂದ ಸ್ವೀಕತಿಯನ್ನು ತಂದು ಹಾಜರುಪಡಿಸಿದ್ದು, ಅದನ್ನ ನೋಡಿ ಗುರುತಿಸಿದ್ದು, ನಂತರ ಅದೇ ದಿನ ಚಾಸಾ.23 ರವರ ಹೇಳಿಕೆಯನ್ನು ದಾಖಲಿಸಿಕೊಂಡಿದ್ದು, ನಂತರ ದಿಃ01.05.02021 ರಂದು ಪ್ರತ್ಯಕ್ಷ ಸಾಕ್ಷಿದಾರರನಾದ ಚಾಸಾ.12 ರವರನ್ನು ವಿಚಾರಣೆಗೊಳಪಡಿಸಿ ಆತನ ಹೇಳಿಕೆಯನ್ನು ಹಾಗೂ ದಿಃ03.05.2021 ರಂದು ಚಾಸಾ.11 ಮತ್ತು 16 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆಃ**-53:** ಪ್ರಾ.ಸಾ.**14** ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅದೇ ದಿನ ನೊಂದ ಬಾಲಕಿಯಾದ ಚಾಸಾ.2 ರವರ ಜನ್ಮ ಪ್ರಮಾಣ ಪತ್ರದ ಜೆರಾಕ್ಸ್ ಪ್ರತಿಯನ್ನು ಚಾಸಾ.1 ರವರು ಹಾಜರುಪಡಿಸಿದ್ದು, ಅದನ್ನು ಸ್ವೀಕರಿಸಿಕೊಂಡಿದ್ದು, ಅದೇ ದಿನ ನೊಂದ ಬಾಲಕಿ/ಚಾಸಾ.2 ರವರ ತೋರಿಕೆಯ ಮೇರೆಗೆ ತನ್ನ ಮೇಲೆ ಲೈಂಗಿಕ ಕೃತ್ಯ ನಡೆಸಿದ ಬೆಂಗಳೂರಿನ ಬ್ಯಾಟರಾಯನಪುರದ ತಿರುಪತಿಪಾಳ್ಯದಲ್ಲಿನ ಜಮೀರ್ ಎಂಬಾತನಿಗೆ

ಸಂಬಂಧಿಸಿದ ಬಾಡಿಗೆ ಮನೆಗೆ ಭೇಟಿ ನೀಡಿ, ಅದರ ಮಾಲೀಕರಾದ ವಿಮಲ ಎಂಬುವವರಿಂದ ಒಂದು ಬಾಡಿಗೆ ಪತ್ರವನ್ನು ಪಡೆದುಕೊಂಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆಃ**-54:** ಫ್ರಾ.ಸಾ.**14** ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ04.05.2021 ರಂದು ನೊಂದ ಬಾಲಕಿ/ಚಾಸಾ.2 ರವರ ತೋರಿಕೆಯ ಮೇರೆಗೆ ತನ್ನ ಮೇಲೆ ಲೈಂಗಿಕ ಕೃತ್ಯ ನಡೆಸಿದ ಬ್ಯಾಟರಾಯನಪುರದಲ್ಲಿನ ಮನೆಗೆ ಭೇಟಿ ನೀಡಿ, ಪಂಚರಾದ ಚಾಸಾ.8 ಮತ್ತು 9 ರವರ ಸಮಕ್ಷಮದಲ್ಲಿ ಮಧ್ಯಾಹ್ನ 1.45 ರಿಂದ 2.35 ರವರೆಗೆ ಒಂದು ಸ್ಥಳ ಪಂಚನಾಮೆ ಮಾಡಿ ಅದರ ಮೇಲೆ ಅವರ ಸಹಿಗಳನ್ನು ಪಡೆದಿರುತ್ತೇನೆ. ಸದರಿ ಸಮಯದಲ್ಲಿ ಎರಡು ವರ್ಣರಂಜಿತ ಛಾಯಾಚಿತ್ರಗಳನ್ನು ತೆಗೆಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆಃ**-55:** ಫ್ರಾ.ಸಾ.**14** ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅದೇ ದಿನ ಆರೋಪಿತನು ಕೃತ್ಯಕ್ಕೆ ಬಳಸಿದ ಇಂಡಿಕಾ ಕಾರ್ ನಂಬರ್. ಕೆಎ-51, ಡಿ-0632 ಗೆ ಸಂಬಂಧಿಸಿದಂತೆ 'ಬಿ' ಎಕ್ಸ್ಟ್ರಾಕ್ಟ್ ನ್ನು ಪಡೆದುಕೊಂಡು, ನಂತರ ದಿಃ05.05.2021 ರಂದು ಪ್ರಕರಣದಲ್ಲಿ ತನಿಖೆಯನ್ನು ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆಃ**-56:** ಫ್ರಾ.ಸಾ.**14** ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ06.06.2021 ರಂದು ಬೆಂಗಳೂರಿನ ಎಫ್ ಎಸ್ ಎಲ್ ನಿಂದ ಎರಡು ಎಫ್ ಎಸ್ ಎಲ್ ವರದಿಗಳು ಬಂದಿದ್ದು, ಅವುಗಳನ್ನು ನೋಡಿ ಗುರುತಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆಃ**-57:** ಫ್ರಾ.ಸಾ.**15,** ಚಿದಾನಂದಪ್ಪ ಎಂ.ಗದಗ್ ರವರು ತಮ್ಮ ಸಾಕ್ಷ್ಯದಲ್ಲಿ ದಿಃ 08.12.2020 ರಿಂದ ದಿಃ 27.04.2022 ವರಗೆ ತಾನು ಬೆಂಗಳೂರಿನ ಹೆಬ್ಬಾಳ

ಪೊಲೀಸ್ ಠಾಣೆಯಲ್ಲಿ ಪಿ ಐ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೆನೆ. ದಿಃ 14.03.2021 ರಂದು ಚಾಸಾ-1 ರವರ ಪುನಃ ಹೇಳಿಕೆ ಹಾಗೂ ಚಾಸಾ-3 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ನಂತರ ಪ್ರಕರಣದ ಕಡತವನ್ನು ಮುಂದಿನ ತನಿಖೆಗೆಂದು ಚಾಸಾ-24 ಇವರಿಂದ ದಿಃ15.03.2021 ರಂದು ಪಡೆದುಕೊಂಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆಃ-**58:** ಫ್ರಾ.ಸಾ.**15** ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅದೇ ದಿನ ಚಾಸಾ-24 ರವರ ಮುಖಾಂತರ ನೊಂದ ಬಾಲಕಿ/ಚಾಸಾ-2 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ನಂತರ ಅದೇ ದಿನ ಚಾಸಾ-2 ರವರನ್ನು ಚಾಸಾ-15 ರವರ ಮುಖಾಂತರ ಚಾಸಾ-17 ರವರ ಬಳಿ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲು ಕಳುಹಿಸಿಕೊಟ್ಟಿದ್ದು, ಅದೇ ದಿನ ಪೋಕ್ಸೋ ಕಾಯ್ದೆ ಅಡಿಯಲ್ಲಿನ ಕಲಂಗಳನ್ನು ಅಳವಡಿಸಿಕೊಳ್ಳಲು ನ್ಯಾಯಾಲಯದ ಪೂರ್ವಾನುಮತಿಯನ್ನು ಕೋರಿ ಒಂದು ಮನವಿ ಪತ್ರವನ್ನು ಸಲ್ಲಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆಃ-**59:** ಫ್ರಾ.ಸಾ.**15** ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅದೇ ದಿನ ಆರೋಪಿತರನ್ನು ತಲಾಷೆ ಮಾಡಿ ತಂದು ಹಾಜರುಪಡಿಸಲು ಚಾಸಾ-19 ಮತ್ತು 21 ರವರನ್ನು ನೇಮಿಸಿದ್ದು, ದಿಃ 18.03.2021 ರಂದು ನೊಂದ ಬಾಲಕಿಯ ಸ್ವ ಇಚ್ಛಾ ಹೇಳಿಕೆಗಳನ್ನು ಬೆಂಗಳೂರಿನ 21 ಹೆಚ್ಚುವರಿ ಸಿ.ಎಂ. ನ್ಯಾಯಾಲಯದ ಮುಖಾಂತರ ದಾಖಲಿಸಿಕೊಂಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆಃ-**60:** ಫ್ರಾ.ಸಾ.**15** ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅದೇ ದಿನ 1 ನೇ ಆರೋಪಿತನಾದ ಜಾವೀದ್ ಅಲಿಯಾಸ್ ಸೈಯದ್ ಇನಾಯತ್ ನನ್ನು ಚಾಸಾ-19 ಮತ್ತು 21 ರವರು ಕೃತ್ಯಕ್ಕೆ ಬಳಸಲಾಗಿದ್ದ ಇಂಡಿಕಾ ಕಾರ್ ನಂ. ಕೆಎ.51.ಡಿ.0632 ನ್ನು ಹಾಜರುಪಡಿಸಿದರ ಮೇರೆಗೆ 1 ನೇ ಆರೋಪಿತನನ್ನು ದಸ್ತಗಿರಿ ನಿಯಮಗಳನ್ನು

ಪಾಲಿಸಿ ದಸ್ತಗಿರಿ ಮಾಡಿ ಆತನನ್ನು ವಿಚಾರಣೆಗೆ ಒಳಪಡಿಸಿ ಆತನ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ ಹಾಗೂ 1 ನೇ ಆರೋಪಿತನಿಗೆ ಸಂಬಂಧಿಸಿದ ಸ್ವ ಇಚ್ಛಾ ಹೇಳಿಕೆಯ ಮೇಲೆ ತಾನು ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ**-61:** ಫ್ರಾ.ಸಾ.**15** ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅದೇ ದಿನ ಸಾಯಂಕಾಲ 07.15 ರಿಂದ 08.20 ಗಂಟೆಯವರೆಗೆ ಇಂಡಿಕಾ ಕಾರನ್ನು ಚಾಸಾ-13 ಮತ್ತು 14 ರವರ ಸಮಕ್ಷಮದಲ್ಲಿ ಅಮಾನತ್ತು ಪಂಚನಾಮೆಯನ್ನು ಮಾಡಿ ಅಮಾನತ್ತು ಪಡಿಸಿಕೊಂಡಿದ್ದು, ಅದಕ್ಕೆ ಸಂಬಂಧಿಸಿದಂತೆ 2 ವರ್ಣರಂಜಿತ ಛಾಯಾಚಿತ್ರಗಳನ್ನು ತೆಗೆಸಿದ್ದು, ಅವುಗಳನ್ನು ನೋಡಿ ಗುರುತಿಸಿದ್ದು, ನಂತರ ಕಾರಿಗೆ ಸಂಬಂಧಿಸಿದಂತೆ ಒಂದು ಸ್ವತ್ತಿನ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ**-62:** ಫ್ರಾ.ಸಾ.**15** ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅದೇ ದಿನ ಚಾಸಾ-19 ಮತ್ತು 21 ಇವರ ಹೇಳಿಕೆಗಳನ್ನು ದಾಖಲಿಸಿಕೊಂಡಿದ್ದು, ದಿಃ 19.03.2021 ರಂದು 1 ನೇ ಆರೋಪಿತನ ತೋರಿಕೆಯ ಮೇರೆಗೆ ಬೆಳಿಗ್ಗ 08.15 ರಿಂದ 09.30 ರ ವರೆಗೆ ಘಟನಾ ಸ್ಥಳವಾದ ರಾಮನಗರ ಜಿಲ್ಲೆಯ ಬಿಡದಿ ಪೊಲೀಸ್ ಠಾಣೆಯ ಸರಹದ್ದಿನಲ್ಲಿರುವ ವಂಡರ್ ಲಾ ರಸ್ತೆಯಲ್ಲಿರುವ ಲಕ್ವನರ್ ಸಿಟಿ ಕಂಪೌಂಡ್ ನಲ್ಲಿ ಇರುವ ಖಾಲಿ ನಿವೇಶನಕ್ಕೆ ಭೇಟಿ ನೀಡಿ ಪಂಚಾರಾದ ಚಾಸಾ-6 ಮತ್ತು 7 ರವರ ಸಮಕ್ಷಮದಲ್ಲಿ ಸ್ಥಳ ಪಂಚನಾಮೆಯನ್ನು ಮಾಡಿ ಅದರ ಮೇಲೆ ಅವರ ಸಹಿಗಳನ್ನು ಪಡೆದಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ**-63:** ಫ್ರಾ.ಸಾ.**15** ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅದೇ ದಿನ 1 ನೇ ಆರೋಪಿತನನ್ನು ಡಾ. ಬಿ.ಆರ್ ಮೆಡಿಕಲ್ ಕಾಲೇಜ್ ಆಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ, ನಂತರ ಅದೇ ದಿನ ಬೆಂಗಳೂರಿನ ಸಿ.ಸಿ.ಹೆಚ್.55 ನ್ಯಾಯಾಧೀಶರ

ಮುಂದೆ ಆರೋಪಿತನನ್ನು ಹಾಜರುಪಡಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ**-64:** ಫ್ರಾ.ಸಾ.**15** ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ 24.03.2021 ರಂದು, ಚಾಸಾ-2 ರವರ ವೈದ್ಯಕೀಯ ಪರೀಕ್ಷೆಯ ಸಮಯದಲ್ಲಿ ವೈದ್ಯರು ಶೇಖರಿಸಿಕೊಂಡಿದ್ದ 10 ವಸ್ತುಗಳನ್ನು ವೈದ್ಯಕೀಯ ದಾಖಲಾತಿಗಳೊಂದಿಗೆ ಚಾಸಾ-17 ರವರಿಂದ ಚಾಸಾ-15 ರವರು ತಂದು ಹಾಜರುಪಡಿಸಿದ ಮೇರೆಗೆ ವಶಕ್ಕೆ ಪಡೆದು ಆ ಕುರಿತು ಸ್ವತ್ತಿನ ಪಟ್ಟಿಗೆ ಅಳವಡಿಸಿಕೊಂಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ**-65:** ಫ್ರಾ.ಸಾ.**15** ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ 26.03.2021 ರಂದು ಸದರಿ ಮು.ಮಾ. 1 ರಿಂದ 10 ಗಳನ್ನು ಚಾಸಾ-22 ರವರ ಮುಖಾಂತರ ಬೆಂಗಳೂರಿನ ಎಫ್ ಎಸ್ ಎಲ್ ಗೆ ರಸಾಯನಿಕ ಪರೀಕ್ಷೆಗೆಂದು ಕಳುಹಿಸಿದ್ದು, ಸದರಿ ಇವರು ಎಫ್ ಎಸ್ ಎಲ್ ಯಿಂದ ಒಂದು ಸ್ವಕೃತಿ ಪತ್ರವನ್ನು ತಂದು ಹಾಜರುಪಡಿಸಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ**-66:** ಫ್ರಾ.ಸಾ.**15** ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ 29.03.2021 ರಂದು 1 ನೇ ಆರೋಪಿತನಿಗೆ ಸಂಬಂಧಿಸಿದ ವೈದ್ಯಕೀಯ ಪ್ರಮಾಣ ಪತ್ರವನ್ನು ಚಾಸಾ-18 ರವರಿಂದ ಪಡೆದುಕೊಂಡಿದ್ದು, ನಂತರ ಪ್ರಕರಣದಲ್ಲಿನ ಕೃತ್ಯ ಚನ್ನಪಟ್ಟಣದ ಗ್ರಾಮಾಂತರ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಆಗಿದ್ದ ಕಾರಣ ದಿಃ 29.032021 ರಂದು ನ್ಯಾಯಾಲಯದ ಪೂರ್ವಾನುಮತಿಯ ಮೇರೆಗೆ ದಿಃ 30.03.2021 ರಂದು ಮುಂದಿನ ತನಿಖೆಗೆಂದು ಚನ್ನಪಟ್ಟಣದ ಗ್ರಾಮೀಣ ಪೊಲೀಸ್ ಠಾಣೆಗೆ ಕಡತವನ್ನು ಪ್ರಕ್ರಿಯೆಗೆ ಅನುಗುಣವಾಗಿ ಕಳುಹಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ**-67:** ಫ್ರಾ.ಸಾ.**16,** ಮಹಮ್ಮದ್ ಫಯಾಜ್ ಪಾಷ ರವರು ತಮ್ಮ ಸಾಕ್ಷ್ಯದಲ್ಲಿ 2009 ರಿಂದ 2021 ರವರೆಗೆ ತಾನು ಹೆಬ್ಬಾಳ ಪೊಲೀಸ್ ಠಾಣೆಯಲ್ಲಿ ಹೆಚ್.ಸಿ.ನಂ.7376 ಎಂದು ಕರ್ತವ್ಯ ನಿರ್ವಹಿಸುತ್ತಿದ್ದೆ. ದಿಃ 14.03.2021 ರಂದು ಚಾಸಾ-24 ರವರು ತನಗೆ ಮತ್ತು ಚಾಸಾ-20 ರವರಿಗೆ ನೊಂದ ಬಾಲಕಿಯಾದ ಚಾಸಾ-2 ರವರನ್ನು ಪತ್ತೆ ಮಾಡಿ ತಂದು ಹಾಜರುಪಡಿಸುವಂತೆ ನಿರ್ದೇಶಿಸಿದರ ಮೇರೆಗೆ ಬಾತ್ಮಿದಾರರ ಖಚಿತ ಮಾಹಿತಿಯ ಮೇರೆಗೆ ದಿನ್ನೂರು ಮುಖ್ಯ ರಸ್ತೆಯ ಬಸ್ ಸ್ಟ್ಯಾಂಡ್ ಹತ್ತಿರ ಹೋಗಿ ಸದರಿ ಚಾಸಾ-2 ರವರನ್ನು ತಮ್ಮ ವಶಕ್ಕೆ ಪಡೆದು ಚಾಸಾ-24 ರವರ ಮುಂದೆ ಹಾಜರುಪಡಿಸಿ, ಆ ಕುರಿತು ಒಂದು ವರದಿಯನ್ನು ಚಾಸಾ-24 ರವರಿಗೆ ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ**-68:** ಫ್ರಾ.ಸಾ.**16** ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ 18.03.2021 ರಂದು ತನಗೆ ಮತ್ತು ಚಾಸಾ-21 ರವರನ್ನು 1 ನೇ ಆರೋಪಿತನಾದ ಜಾವೀದ್ ಎಂಬಾತನನ್ನು ತಲಾಷೆ ಮಾಡಿ ತಂದು ಹಾಜರುಪಡಿಸುವಂತೆ ನಿರ್ದೇಶಿಸಿದರ ಮೇರೆಗೆ ಅದೇ ಪ್ರಕರಣದ ಬಾತ್ಮಿದಾರರ ಮಾಹಿತಿಯ ಮೇರೆಗೆ ಸಿ.ಬಿ.ಐ. ಜಂಕ್ಷನ್ ಬಳಿ ಇರುವ ಎಂ ಟಿ ಭವನ ಬಳ್ಳಾರಿ ರಸ್ತೆ, ಆರ್ ಟಿ ನಗರದ ಬಸ್ ನಿಲ್ದಾಣದಲ್ಲಿ ನಿಂತಿದ್ದ ಒಂದು ಟಾಟಾ ಇಂಡಿಕಾ ಕಾರ್ ಕೆಎ 51 ಡಿ 0632 ನಲ್ಲಿ ಆರೋಪಿ ಜಾವೀದ್ ಇದ್ದು, ಆತನ ಕುರಿತು ಬಾತ್ಮಿದಾರರ ಮೂಲಕ ಖಚಿತ ಪಡಿಸಿಕೊಂಡು ಸದರಿ ಆರೋಪಿತನನ್ನು ಆತನ ಕಾರನೊಂದಿಗೆ ವಶಕ್ಕೆ ಪಡೆದು ಚಾಸಾ-28 ರವರ ಮುಂದೆ ಹಾಜರುಪಡಿಸಿ ಒಂದು ವರದಿಯನ್ನು ಸಲ್ಲಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ**-69:** ಫ್ರಾ.ಸಾ.**16** ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ದಿಃ 20.03.2021 ರಂದು ಸದರಿ ಇಂಡಿಕಾ ಕಾರ್ ನಂ. ಕೆಎ 51 ಡಿ 0632 ನ್ನು ತಾನೇ ಚಾಸಾ-28 ರವರ ನಿರ್ದೇಶನದ ಮೇರೆಗೆ ಚನ್ನಪಟ್ಟಣದ ಗ್ರಾಮೀಣ ಪೊಲೀಸ್ ಠಾಣೆಗೆ ತಂದು ಹಾಜರುಪಡಿಸಿ ನಂತರ ಸ್ವೀಕೃತಿಯನ್ನು ಪಡೆದು ತಂದು ಹಾಜರುಪಡಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ-**70:** ಪ್ರಾ.ಸಾ.**17,** ಶಹನಾಜ್ ಫಾತಿಮಾ ರವರು ತಮ್ಮ ಸಾಕ್ಷ್ಯದಲ್ಲಿ 2004 ರಿಂದ ಈವರೆಗೆ ವಿವಿಧ ಹುದ್ದೆಗಳಲ್ಲಿ ಬೆಂಗಳೂರಿನ ಎಫ್.ಎಸ್.ಎಲ್. ನಲ್ಲಿ ಕರ್ತವ್ಯ ನಿರ್ವಹಿಸುತ್ತಾ ಬಂದಿದ್ದೇನೆ ಎಂದು, ದಿಃ 08.04.2021 ರಂದು ಚನ್ನಪಟ್ಟಣದ ಗ್ರಾಮಾಂತರ ಪೊಲೀಸ್ ಠಾಣೆಯ ಅಪರಾಧಕ್ಕೆ ಸಂಬಂಧಿಸಿದಂತೆ ಚನ್ನಪಟ್ಟಣದ ಡಿ ವೈ ಎಸ್ ಪಿ ರವರು ಪಿಸಿ ನಂ. 701 ಶ್ರೀ ನಾಗಪ್ಪ ಪರಮಾನಟ್ಟಿ ಇವರ ಮುಖಾಂತರ ಸೀಲಾದ ಸ್ಥಿತಿಯಲ್ಲಿದ್ದ 2 ವಸ್ತುಗಳನ್ನು ಕಳುಹಿಸಿದ್ದು, ಅವುಗಳನ್ನು ತಮ್ಮ ಎಫ್.ಎಸ್.ಎಲ್.ನ ಸ್ವೀಕೃತಿ ವಿಭಾಗದಲ್ಲಿ ಸ್ವೀಕರಿಸಿಕೊಂಡು ಅದಕ್ಕೆ ರಿಜಿಸ್ಟ್ರೇಷನ್ ನಂಬರ್ ನೀಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ-**71:** ಪ್ರಾ.ಸಾ.**17** ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಪ್ರಕರಣಕ್ಕೆ ಸಂಬಂಧಿಸಿದಂತೆ ದಿಃ 21.04.2021 ರಂದು ಪಿಸಿ ನಂ. 701 ರವರು ಇನ್ನೊಂದು ಸೀಲ್ ಆದ ವಸ್ತುವನ್ನು ತಮ್ಮ ಎಫ್ ಎಸ್ ಎಲ್ ನ ಸ್ವೀಕೃತಿ ವಿಭಾಗಕ್ಕೆ ತಂದು ನೀಡಿದ್ದು, ಅದನ್ನು ಸ್ವೀಕರಿಸಿ ಕೊಂಡಿದ್ದು, ಅದಕ್ಕೆ ನಂಬರ್ ನೀಡಲಾಗಿದ್ದು, ಮೇಲೆ ಹೇಳಿದ ಎಲ್ಲಾ ವಸ್ತುಗಳು ಸುಸ್ಥಿತಿಯಲ್ಲಿದ್ದು ಅವು ಮಾದರಿ ಸೀಲ್ ನೊಂದಿಗೆ ತಾಳೆಯಾಗುತ್ತಿದ್ದವು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ-**72:** ಪ್ರಾ.ಸಾ.**17** ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ 1 ನೇ ವಸ್ತುವನ್ನು ತೆರೆದು ನೋಡಲಾಗಿ ಅದರಲ್ಲಿ ವೈದ್ಯಾಧಿಕಾರಿಗಳು ನೊಂದ ಬಾಲಕಿಯಿಂದ ಸಂಗ್ರಹಿಸಲ್ಪಟ್ಟ ಪ್ರೊಡೆಕ್ಟ ಆಫ್ ಕಂಸಪ್ಷನ್ ಇತ್ತು, ಅದಕ್ಕೆ ತಾನು ಡಿ ಎನ್ ಎ ಕೋಡ್ ನಂ. ಪಿ-5875 ಎಂದು ನೀಡಿದ್ದು, 2 ನೇ ವಸ್ತುವನ್ನು ತೆರೆದು ನೋಡಲಾಗಿ ಅದರಲ್ಲಿ 2 ಸೀಲ್ ಆಗಿದ್ದ ವ್ಯಾಕ್ಯೂಟೈನರ್ಸ ಇದ್ದು ಅವುಗಳಲ್ಲಿ ನೊಂದ ಬಾಲಕಿಗೆ ಸಂಬಂಧಿಸಿದಂತೆ ವೈದ್ಯಾಧಿಕಾರಿಗಳು ಸಂಗ್ರಹಿಸಿದ ರಕ್ತದ ಮಾದರಿಗಳು ಇದ್ದವು, ಅದಕ್ಕೆ ತಾನು ಡಿಎನ್ಎ ಕೋಡ್ ನಂ. ಪಿ-5876 ಎಂದು ನಂಬರ್ ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ-**73:** ಫ್ರಾ.ಸಾ.**17** ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ 3 ನೇ ವಸ್ತುವನ್ನು ತೆರೆದು ನೋಡಲಾಗಿ ಅದರಲ್ಲಿ 2 ಸೀಲ್ ಆಗಿದ್ದ ವ್ಯಾಕ್ಯೂಟೈನರ್ಸ್ ಇದ್ದು ಅದರಲ್ಲಿ ಒಬ್ಬ ಸೈಯದ್ ಇನಾಯಿತ್ ಅಲಿಯಾಸ್ ಜಾವೀದ್ ತಂದೆ ಸೈಯದ್ ವಾಜೀದ್ ನಿಂದ ವೈದ್ಯಾಧಿಕಾರಿಗಳು ಸಂಗ್ರಹಿಸಲ್ಪಟ್ಟ ರಕ್ತದ ಮಾದರಿಗಳು ಇದ್ದು, ಅದಕ್ಕೆ ತಾನು ಡಿ ಎನ್ ಎ ಕೋಡ್ ನಂ. ಪಿ-5871 ಎಂದು ನಂತರ್ ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ-**74:** ಫ್ರಾ.ಸಾ.**17** ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ 3 ವಸ್ತುಗಳನ್ನು ವೈಜ್ಞಾನಿಕವಾಗಿ ಡಿ ಎನ್ ಎ ಪರೀಕ್ಷೆಗೆ ಒಳಪಡಿಸಿ ಅದರಿಂದ ಬಂದ ಫಲಿತಾಂಶದ ಆಧಾರದ ಮೇಲೆ ತನ್ನ ಅಭಿಪ್ರಾಯ ವರದಿಯನ್ನು ನೀಡಿರುತ್ತೇನೆ ಎಂದು, ಸದರಿ ಡಿಎನ್ಎ ಪರೀಕ್ಷೆಗೆ ಬಳಸಿದ ವಿಧಾನಗಳ ಕುರಿತು ಮೆಥಡ್ ಆಫ್ ಎನಾಲೀಸಿಸ್ ನಲ್ಲಿ ವಿವರಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ-**75:** ಫ್ರಾ.ಸಾ.**17** ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ತನ್ನ ಅಭಿಪ್ರಾಯದಲ್ಲಿ ವಸ್ತು ಸಂ. 1 ರಲ್ಲಿ ಕಳುಹಿಸಿದ್ದ ಪ್ರೊಡೆಕ್ಟ ಆಫ್ ಕಂಸಪ್ಷನ್ ನ ಡಿಎನ್ಎ ಪ್ರೋಫೈಲ್ ರೀಸಲ್ಟ್ ನೊಂದ ಬಾಲಕಿಯ ಮತ್ತು ಸೈಯದ್ ಇನಾಯಿತ್ ಅಲಿಯಾಸ್ ಜಾವೀದ್ ತಂದೆ ಸೈಯದ್ ವಾಜೀದ್ ಇವರ ವಸ್ತು, ಸಂ. 2 ಮತ್ತು 3 ಗಳಲ್ಲಿ ಕಳುಹಿಸಿದ್ದ ರಕ್ತದ ಮಾದರಿಗಳ ಡಿಎನ್ ಎ ಪ್ರೋಫೈಲ್ ಗಳಿಗೆ ಹೊಂದಾಣಿಕೆಯಾಗುತ್ತಿದ್ದುದ್ದರಿಂದ ಸದರಿ ವಸ್ತು ಸಂ. 1 ರಲ್ಲಿ ಇರುವ ಪ್ರೋಡೆಕ್ಟ ಅಫ್ ಕಂಸಪ್ಷನ್ ನ ಜೈವಿಕ ತಾಯಿ ನೊಂದ ಬಾಲಕಿ ಹಾಗೂ ಜೈವಿಕ ತಂದೆ ಸೈಯದ್ ಇನಾಯಿತ್ ಅಲಿಯಾಸ್ ಜಾವೀದ್ ತಂದೆ ಸೈಯದ್ ವಾಜೀದ್ ಆಗಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ-**76:** ಫ್ರಾ.ಸಾ.**17** ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆ ಪ್ರಕಾರ ತ ಸವಿವರವಾದ ಡಿಎನ್ಎ ವರದಿಯನ್ನು ಅನುಬಂಧ 1 ರಲ್ಲಿ ಡಿಎನ್ಎ ಪರೀಕ್ಷೆಯ ಫಲಿತಾಂಶ ಮತ್ತು ಅನುಬಂಧ 2 ರಲ್ಲಿ ಇಂಟರ್‌ಪ್ರಿಟೆಟೀವ್ ಫಲಿತಾಂಶ ಮತ್ತು ಮಾದರಿ ಸೀಲ್ ನೊಂದಿಗೆ

ಹಾಗೂ ಐಡೆಂಟಿಪಿಕೇಶನ್ ಫಾರಂಗಳು ಮತ್ತು ಪಾರ್ವಡಿಂಗ್ ನೋಟ್ ಗಳನ್ನು, ತಮ್ಮ ಎಫ್ ಎಸ್ ಎಲ್ ನ ನಿರ್ದೇಶಕರ ಸಹಿಯನ್ನು ಪಡೆದು ಸಂಬಂಧಪಟ್ಟ ಪೊಲೀಸರಿಗೆ ಕಳುಹಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆಃ-**77:** ಫ್ರಾ.ಸಾ.**17** ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ತಾನು ನೀಡಿದ ಡಿಎನ್ಎ ವರದಿಯನ್ನು, ಮಾದರಿ ಸೀಲ್ ನ್ನು ಅದರ ಮೇಲೆ ಇರುವ ತನ್ನ ಸಹಿಗಳನ್ನು ಹಾಗೂ ಸೈಯದ್ ಇನಾಯತ್ ನಿಗೆ ಸಂಬಂಧಿಸಿದ ಐಡೆಂಟಿಪಿಕೇಶನ್ ಫಾರಂಗಳು ಮತ್ತು ಪಾರ್ವಡಿಂಗ್ ನೋಟ್ ಇರುವ ತನ್ನ ಸಹಿಗಳನ್ನು ನೋಡಿ ಗುರುತಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆಃ-**78:** ಬೇರೆ ಏನಾದರೂ ಹೇಳುವುದು ಇದೆಯೇ?

ಉತ್ತರಃ-

ಪ್ರಶ್ನೆಃ-**79:** ನಿಮ್ಮ ಪರ ಸಾಕ್ಷಿ ವಿಚಾರಣೆ ಇದೆಯೇ?

ಉತ್ತರಃ-

(ಈ ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಕನ್ನಡದಲ್ಲಿ ಓದಿ ಹೇಳಲಾಗಿ ಆರೋಪಿ ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಗಿದೆ ಎಂದು ದೃಢೀಕರಿಸಲಾಗಿದೆ.)

ದಿಃ 14/07/2025

(ಎಂ. ಪಂಚಾಕ್ಷರಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.